ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಚಿಕ್ಕಬಳ್ಳಾಪುರ ತಾಲ್ಲೂಕು ಫ್ಲೌಮಿನ್ ಪ್ರದೇಶ ಎಂಬುದು ತಮಗೆ ಗೊತ್ತಿದೆ. ಉತ್ತರ ಪಿನಾಕಿನಿ ನದಿ ದಂಡೆಯಲ್ಲಿ ಹತ್ತು ಬಾವಿಗಳನ್ನು ತೆಗೆಸಿ ಸುಮಾರು ಹತ್ತು ಲಕ್ಷ ರೂಪಾಯಿನಲ್ಲಿ ಎರಡು ಸಾವಿರ ಎಕರೆ ನೀರಾವರಿಯಾಗುತ್ತಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜೆ. ದೊಡ್ಡಮೇಟಿ.—ಒಂದು ಮಾತು ಒಪ್ಪಿಕೊಳ್ಳಬೇಕು, ಈಗಾಗಲೇ ನಾಕಾದಪು ವಿಳಂಬವಾಗಿದೆ, ಇನ್ನು ಮುಂದೆ ಹೆಚ್ಚು ವಿಳಂಬವಾಗದಂತೆ ಲಕ್ಷ ಕೊಟ್ಟು ಬೇಗ ಕೊನೆ ನಿರ್ಣಯ ಕೈಕೊಳ್ಳರಾಗುತ್ತದೆ.

ಶ್ರೀ ಎ. ಮುನಿಯಪ್ಪ.—ಉತ್ತರ ಪಿನಾಕಿನಿ ನದಿ ದಂಡೆಯಲ್ಲಿ ಒಳ್ಳೆಯ ಬೆಳೆಯಾಗುತ್ತದೆ ಎಂದು ಹೇಳಿ ಕೆಲವರು ಸಣ್ಣ ಸಣ್ಣ ಬಾವಿಗಳನ್ನು ತೆಗೆದು ಅದರಿಂದ ನೀರಾವರಿ ಮಾಡಿಕೊಳ್ಳುತ್ತಾ ಇದ್ದಾರೆ, ರೆವಿನ್ಯೂ ಅಧಿಕಾರಿಗಳು ಜುಲುಂ ಮಾಡಿ ಆ ನೀರು ಉಪಯೋಗಿಸಬಾರದು ಎಂದು ಅಡಚಣೆ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜೆ. ದೊಡ್ಡ ಮೇಟಿ.—ಅದು ನನಗೆ ಗೊತ್ತಿಲ್ಲ.

ಶ್ರೀ ಎ. ಮುನಿಯಪ್ಪ.—ಆ ರೀತಿ ಅಡ್ಡಿಪಡಿಸಿರುವುದು ತಮ್ಮ ಗಮನಕ್ಕೆ ತಂದು ತೋರಿಸಿ ಕೊಟ್ಟರೆ ಅವರಿಗೆ ರಕ್ಷಣೆ ಕೊಡುತ್ತೀರಾ ?

ಶ್ರೀ ಎ. ಜೆ. ದೊಡ್ಡಮೇಟಿ.—ಇವತ್ತಿನ ತನಕ ನಮ್ಮ ಗಮನಕ್ಕೆ ಬಂದಿಲ್ಲ, ನಿರ್ದಿಷ್ಟವಾಗಿ ನಮ್ಮ ಗಮನಕ್ಕೆ ತಂದರೆ ಆ ಬಗ್ಗೆ ಸೂಕ್ತ ವ್ಯವಸ್ಥೆ ಮಾಡಲಾಗುತ್ತದೆ.

ಶ್ರೀ ಬಿ. ವೆಂಕಟರಾಯಪ್ಪ.—ಈ ಯೋಜನೆ ಬಹಳ ಮುಖ್ಯವಾದುದು ಆದ್ದರಿಂದ ಇದನ್ನು ಜಾಗ್ರತೆ ಇಂಪ್ಲಿಮೆಂಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಜೆ. ದೊಡ್ಡಮೇಟಿ—ಪರಿಶೀಲನೆ ಮಾಡುತ್ತೇವೆ.

SHORT NOTICE QUESTIONS AND ANSWERS

Wheat Consigned to Social Welfare Officer, Shetthally

10. Sri H. B. JWALANAIAH (Hassan).—

Will the Minister of State for Food and Civil Supplies be pleased to state :—

(*a*) whether it is not a fact that more than one thousand bags of wheat consigned in the name of "Social Welfare Officer, Shetthally" have arrived at the Hassan Railway Station ;

(*b*) whether Government is aware that those bags are getting damaged as nobody has taken delivery of those bags ;

(*c*) if so, what action the Government propose to take in the mater ?

A.— Sri B. VITTALDAS SHETTY (Minister of State for Food Civil Supplies).—

(*a*) Yes.

(*b*) Yes.

(*c*) The entire stocks have been taken over by Government.

ಶ್ರೀ ಎಚ್. ಬಿ. ಹ್ಯಾಲನಯ್ಯ.—ಸುಮಾರು 1900 ಮೂಟೆ ಗೋಧಿಯನ್ನು ಯಾರು ಯಾರಿಗೆ ಏಕೆ ಕಳುಹಿಸಿ ಕೊಟ್ಟರು. ಸರಕಾರದವರು ಅದನ್ನು ಹೇಗೆ ತೆಗೆದುಕೊಂಡಿದ್ದಾರೆ?

†ಶ್ರೀ ಬಿ. ವಿಠಲದಾಸ ಶೆಟ್ಟಿ.—ಕ್ಯಥೋಲಿಕ್ ರಿಲೀಫ್ ಸರ್ವೀಸ್ ನ್ಯೂ ಡೆಲ್ಲಿ ಅಂತ ಅನ್ನುವ ವರು ರೆವರೆಂಡ್ ಫಾದರ್ ನರೋನ, ಕ್ರಿಶ್ಚಿಯನ್ ವೆಲ್‌ಫೇರ್ ಸೆಂಟರ್ ಹಾಸನ ಅವರಿಗೆ ಕಳುಹಿಸಿ ಕೊಟ್ಟಿದ್ದಾರೆ.

ಶ್ರೀ ಎಚ್. ಬಿ. ಹ್ಯಾಲನಯ್ಯ.—ಏತಕ್ಕಾಗಿ ಕಳುಹಿಸಿಕೊಟ್ಟರು?

ಶ್ರೀ ಬಿ. ವಿಠಲದಾಸ ಶೆಟ್ಟಿ.—ರಿಲೀಫ್ ವರ್ಕ್‌ಗಾಗಿ ಅಂತ ಹೇಳಿ ಕೊಟ್ಟಿದ್ದಾರೆ, ಧರ್ಮಾರ್ಥ ವಾಗಿ ಹಂಚಿಕೆ ಮಾಡುವ ಬಗ್ಗೆ. ಸರ್ಕಾರಕ್ಕೂ ಅದಕ್ಕೂ ಸಂಬಂಧವಿಲ್ಲ.

ಶ್ರೀ ಎಚ್.ಬಿ. ಹ್ಯಾಲನಯ್ಯ.—ಈಗ ಸರ್ಕಾರದವರು ಅದನ್ನು ತೆಗೆದುಕೊಂಡಿದ್ದೇವೆ ಎಂದು ಹೇಳಿಇಲ್ಲ ತಿಳಿಸಿದ್ದೀರಿ. ಸರ್ಕಾರದವರು ತೆಗೆದುಕೊಂಡಿರುವಂತಹ ಗೋಧಿಯನ್ನು ಏನು ಮಾಡು ತ್ತೀರಿ? ಮತ್ತು ಡೆಲ್ಲಿಯಿಂದ ಕಳುಹಿಸಿರುವಂತಹ ಎರಡು ಸಾವಿರ ಮೂಟೆಗೂ ಹೆಚ್ಚಾದಂತಹ ಗೋಧಿ ಅಲ್ಲಿ ಗೋಡೌನ್‌ನಲ್ಲಿ ಕೊಳೆಯುತ್ತಾ ಇರುವುದನ್ನು ಶೆಟ್ಟಿಹಳ್ಳಿ ವಿರೇಜ್‌ಪಂಚಾಯಿತ್ತಿ ಚೇರ್ಮನ್‌ರವರಿಗೆ ತೆಗೆದುಕೊಳ್ಳಿ ಎಂದು ಹೇಳಿ ಆದೇಶ ಕೊಟ್ಟಿದ್ದೀರಾ? ಮತ್ತು ಅವರು ಅದನ್ನು ತೆಗೆದುಕೊಳ್ಳುವು ದಕ್ಕೆ ಸಹಾಯ ಮಾಡಿದ್ದೀರಾ?

ಶ್ರೀ ಬಿ. ವಿಠಲದಾಸ ಶೆಟ್ಟಿ.—ಡೆಪ್ಯೂಟಿ ಕಮಿಷನರಿಗೆ ಆದೇಶ ಕೊಡರಾಗಿತ್ತು, ಐದು ದಿವಸದ ಹಿಂದೆ ತೆಗೆದುಕೊಂಡಿದ್ದಾರೆ.

ಶ್ರೀ ಎಚ್. ಬಿ. ಹ್ಯಾಲನಯ್ಯ.—ಇದಕ್ಕೆ ಸುಮಾರು 13 ಸಾವಿರ ರೂಪಾಯಿನಷ್ಟು ಡೆಮೊರೇಜ್ ಬಿದ್ದಿದೆ ಎಂದು ಹೇಳಿ ತಿಳಿದು ಬಂದಿದೆ, ಅದು ನಿಜವೇ?

ಶ್ರೀ ಬಿ. ವಿಠಲದಾಸ ಶೆಟ್ಟಿ.—13 ಸಾವಿರ ರೂಪಾಯಿ ಡೆಮೊರೇಜ್ ಬಿದ್ದದ್ದು ನಿಜ, ವಾರ್ಫೇಜ್ 13 ಸಾವಿರ ರೂಪಾಯಿ ಬಂದಿದೆ. ಡೆಮೋರೇಜ್ ಬರೀ 300 ರೂಪಾಯಿ ಮಾತ್ರ. ಆದ್ದರಿಂದ ಸರ್ಕಾರದವರು ರೈಲ್ವೆ ಅಥಾರಿಟೀಸ್ ಹತ್ತಿರ ಮಾತನಾಡಿ 13 ಸಾವಿರ ರೂಪಾಯಿ ಕೊಡುವುದು ಬೇಡ ಅಂದ ನಂತರ ಬರೀ 300 ರೂಪಾಯಿಗಳನ್ನು ಕೊಟ್ಟು ಅದನ್ನು ವಶಪಡಿಸಿಕೊಂಡಿದ್ದೇವೆ.

ಶ್ರೀ ಎಚ್. ಬಿ. ಹ್ಯಾಲನಯ್ಯ.—ಈ ಗೋಧಿಯನ್ನು ಮುಫತ್ತಾಗಿ ಬಡವರಿಗೆ ಹಂಚುತ್ತೀರಾ?

ಶ್ರೀ ಬಿ. ವಿಠಲದಾಸ ಶೆಟ್ಟಿ.—ಹಂಚುವ ವ್ಯವಸ್ಥೆ ಮಾಡುತ್ತಾ ಇದ್ದೇವೆ.

Sri B. B. SAYANAK.—May I know the entire stock which is taken over by the Government is a damaged One?

Sri B. VITTALDAS SHETTY.—No. We have asked the Deputy Commissioner to segregate such stock if there is any.

1-00 P.M.

ಶ್ರೀ ಎಚ್. ಡಿ. ದೇವೇಗೌಡ.—ಸ್ಟೇಷನ್ನಿನಲ್ಲಿ ಬಿದ್ದು ಕೊಳೆಯುತ್ತಿರುವುದಲ್ಲದೆ ಈಗಾಗಲೆ ಫಾದರ್ ನರೋನ ವಶದಲ್ಲಿದ್ದು ಸಿಂಕಿಂಗ್ ಇರಿಗೇಷನ್ ವೆರ್ಸ್ ಸಲುವಾಗಿ ಕೆಲವು ಭಾಗ ಹಂಚಿಕೆ ಯಾಗಿ ಉಳಿದಿರುವುದನ್ನು ಬಡವರಿಗೆ ಹಂಚಲು ವ್ಯವಸ್ಥೆ ಮಾಡುತ್ತೀರಾ?

ಶ್ರೀ ಬಿ. ವಿಠಲದಾಸ ಶೆಟ್ಟಿ.—ಫಾದರ್ ನರೋನರವರ ಬಳಿ ಇರುವುದನ್ನು ಸರಕಾರ ತೆಗೆದು ಕೊಳ್ಳುವುದಕ್ಕೆ ಅಧಿಕಾರವಿಲ್ಲ. ಈಗ ಅವರು ಒಪ್ಪಿಕೊಂಡ ಪ್ರಕಾರ ಸರಕಾರ ಪಡೆದುಕೊಂಡಿದೆ. ಅದನ್ನು ಹಂಚರಾಗುವುದು.

ಶ್ರೀ ಬಿ. ಪಿ. ಗಂಗಾಧರ್.—ಬಹಳ ದಿವಸಗಳಿಂದಲೂ ರೇಲ್ವೆ ಯಾರ್ಡಿನಲ್ಲಿ ಇದ್ದು ಹುಳಿಯುವ ಸ್ಟೇಜಿಗೆ ಬರುವುದಕ್ಕೆ ಅವಕಾಶ ಕೊಟ್ಟವರು ಯಾರು? ಹಾಗಾಗಲು ಕಾರಣವೇನು?

ಶ್ರೀ ಬಿ. ವಿಠಲದಾಸ ಶೆಟ್ಟಿ.—ಸರಕಾರಕ್ಕೂ ಅದಕ್ಕೂ ಸಂಬಂಧವಿಲ್ಲ. ಕಂಪ್ಲೈಂಟ್ ಕೊಟ್ಟ ನಂತರ ಸರಕಾರ ತಕ್ಕ ಕಾರ್ಯಕ್ರಮ ಕೈಕೊಂಡಿದೆ. It is purely a private transaction.

Sri S. CHANDRAKANTH.—Is it a fact that the whole stock has been rendered unfit for human consumption ?

Sri B. VITTALDAS SHETTY.—No. It is not true.

ಶ್ರೀ ಎಚ್. ಬಿ. ಜ್ವಾಲನಯ್ಯ.—ಫಾದರ್ ನರೋನರವರಿಗೆ ಹಿಂದೆ ಕೊಟ್ಟಿದ್ದ ಗೋಧಿ ಮುಂತಾದ್ದು ಎರಡು ಸಾವಿರ ಮೂಟೆಗಳಿಗಿಂತ ಹೆಚ್ಚಾಗಿದ್ದು ಅದು ಕೊಳೆಯುತ್ತಾ ಬಿದ್ದಿತ್ತು. ದೆಹಲಿಗೆ ಸಂಬಂಧಪಟ್ಟ ಆರ್ಗನೈಜೇಷನ್ ಆ ಗೋಧಿ ಮತ್ತು ಇತರ ಸಾಮಗ್ರಿಗಳನ್ನು ಶೆಟ್ಟಿಹಳ್ಳಿ ಗ್ರಾಮಪಂಚಾಯತಿಗೆ ಕೊಡಬೇಕೆಂದು ಬರೆದಿದ್ದರು. ಫಾದರ್ ನರೋನರವರು ಅಲ್ಲಲ್ಲಿದಿರುವುದರಿಂದ ಸರಕಾರ ಅದನ್ನು ಪಂಚಾಯತಿಯವರಿಗೆ ಕೊಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ವಿಠಲದಾಸ ಶೆಟ್ಟಿ.—ಸರಕಾರ ಅದನ್ನು ಪಡೆದುಕೊಂಡಿದೆ. ಪಂಚಾಯತಿ ಬೋರ್ಡಿಗೆ ಅದನ್ನು ಕೊಡುವುದಕ್ಕೆ ತಯಾರಾಗಿದ್ದೇವೆ. ಕೊಡುವಂತೆ ದೆಹಲಿಯ ರಿಲೀಫ್ ಸರ್ವಿಸ್ ನವರು ತಿಳಿಸಿದ್ದಾರೆ. ಆದರೆ ಪಂಚಾಯತಿ ಬೋರ್ಡು 13 ಸಾವಿರ ರೂಪಾಯಿ ಕೊಡಲು ಶಕ್ತ ಹೊಂದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—13 ಸಾವಿರ ರೂಪಾಯಿಗೆ ಸಂಬಂಧಪಟ್ಟಿದ್ದು ರೈಲ್ವೆ ಸ್ಟೇಷನ್‌ನಲ್ಲಿರುವುದು. ಈಗಾಗಲೆ ಬೇರೆಯವರಲ್ಲಿ ಕೊಂಚ ಫಾದರ್ ನರೋನರವರು ಹಂಚಿದ್ದಾರೆ. ಅದರಲ್ಲಿ ಉಳಿದಿರುವುದನ್ನು ಲೋಕರ್ ಪಂಚಾಯತಿಗೆ ಹಂಚಿ ಆ ಮೂಲಕ ಹಂಚಿಕೆ ಮಾಡುವಂತೆ ಅಧಿಕಾರ ಕೊಟ್ಟಿದ್ದಾರೆ. ಆದ್ದರಿಂದ ಪಂಚಾಯತಿ ಮೂಲಕ ಅದನ್ನು ಹಂಚುವುದಕ್ಕೆ ಕ್ರಮ ಕೈಕೊಳ್ಳುತ್ತೀರಾ ?

Sri B. VITTALDAS SHETTY.—We will consider that suggestion but we have no control over private transaction.

Sri S. SIVAPPA.—I have a question to put.

Mr. SPEAKER.—The Leader of the Opposition should not embarrass the Chair.

SHORT NOTICE QUESTION AND ANSWER

7. Sri B. B. SAYANAK (Belgaum).—

Will the Chief Minister be pleased to state :—

(*a*) whether it is a fact that there was firing on 3rd July 1968 in the hall of Bell of Arms in Belgaum Headquarters ;

(*b*) the number of policemen injured ;

(*c*) the reason for the firing ;

(*d*) whether any-policeman was arrested ;

A.—Sri VEERENDRA PATIL (Chief Minister).—

(*a*) Yes.

(*b*) Three.

(*c*) Altercation regarding the issue of ammunition.

(*d*) An Armed Police Constable has been arrested.

Sri B. B. SAYANAK.— May I know whether the firing took plac during day time or night time ? what is the exact time ;